ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

-1-

ವಿಷಯ ..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

EE/BJP/BBMP/ 2681 /20-21

25/2/21

ವಿಷಯ: Improvements to Storm water Drains in ward no 5 Jakkur ಕಾಮಗಾರಿಗೆ ಸಂಬಂಧಿಸಿದ ಬಿಲ್ ಪಾವತಿಗೆ ಶ್ರೀ. ಮಧುಗೌಡ ಹೆಚ್.ಎ ರವರು ನೀಡಿರುವ ಮೆ॥ ಕೆ.ಎಂ.ಡೆವಲಪರ್ಸ್ ಹೆಸರಿನಲ್ಲಿ ನೀಡಿರುವ ಖಾತೆ ಸಂಖ್ಯೆಗೆ ಪಾವತಿಸುವ ಬಗ್ಗೆ.

ಉಲ್ಲೇಖ: 1. ಶ್ರೀ. ಮಧುಗೌಡ ಹೆಚ್.ಎ, ಗುತ್ತಿಗೆದಾರರು ರವರ ಮನವಿ ಪತ್ರದ ದಿನಾಂಕ: 23-02-2021.

2. ಸದರಿ ಕಾಮಗಾರಿಯ ಟಾಸ್ಕ್ ಐ.ಎಫ್.ಎಂ.ಎಸ್‌ನಲ್ಲಿ ವಿಭಾಗದ ಕಛೇರಿಗೆ ದಿನಾಂಕ: 22-02-2021 ರಂದು ಹಿಂದಿರುಗಿಸಲಾಗಿದೆ.

* * * * *

1) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರಾದ ಶ್ರೀ. ಮಧುಗೌಡ. ಹೆಚ್.ಎ ರವರು ದಿನಾಂಕ: 23-02-2021 ರಂದು ಬ್ಯಾಟರಾಯನಪುರ ವಿಭಾಗದ ಕಛೇರಿಗೆ ಮನವಿ ಪತ್ರ ನೀಡಿ ವಾರ್ಡ್ ಸಂಖ್ಯೆ.05 ರಲ್ಲಿ Improvements to Storm water Drains in ward no 5 Jakkur ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿ ಹಾಗೂ ಬಿ.ಆರ್ ಸಹ ನಮೂದಿಸಿ ಸಮುಚಿತ ಮಾರ್ಗದಲ್ಲಿ ಬಿಲ್ ಪಾವತಿಗಾಗಿ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಆನ್‌ಲೈನ್ ಮುಖಾಂತರ ಟಾಸ್ಕ್ ರವಾನಿಸಲಾಗಿದ್ದು, ಸದರಿ ಬಿಲ್ ಪಾವತಿಗೆ ಸಂಬಂಧಿಸಿದಂತೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಪರಿಶೀಲಿಸುವ ಸಂಧರ್ಭದಲ್ಲಿ ಗುತ್ತಿಗೆದಾರರು ನೀಡಿರುವ ಚೆಕ್ ಪ್ರತಿಯ ಖಾತೆಯಲ್ಲಿರುವ ಹೆಸರು ಹಾಗೂ ಕಾರ್ಯಾದೇಶದಲ್ಲಿರುವ ಹೆಸರಿಗೂ ಹೊಂದಾಣಿಕೆ ಆಗುತ್ತಿಲ್ಲವೆಂದು ಸದರಿ ಟಾಸ್ಕ್ ಅನ್ನು ಹಿಂದಿರುಗಿಸಿರುತ್ತಾರೆಂದು ತಿಳಿಸುತ್ತಾ, ಸದರಿ ಹೊಂದಾಣಿಕೆಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳೊಂದಿಗೆ ಸರಿಪಡಿಸಿ ಮರು ಅಪ್‌ಲೋಡ್ ಮಾಡಲು ಕೋರಿರುತ್ತಾರೆ.

ಪರಿಶೀಲಿಸಲಾಗಿ ದಿನಾಂಕ: 22-02-2021 ರಂದು ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಿಂದ ಸದರಿ ಟಾಸ್ಕ್ Returned by CAO AS Contractor cheque differs ಎಂದು ತಿಳಿಸುತ್ತಾ ವಿಭಾಗದ ಕಛೇರಿಗೆ ಹಿಂದಿರುಗಿಸಿರುತ್ತಾರೆ. ಮುಂದುವರೆದಂತೆ ಗುತ್ತಿಗೆದಾರರು ನೀಡಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ. ಮಧುಗೌಡ ಹೆಚ್.ಎ ರವರೇ ಮೆ॥ ಕೆ.ಎಂ ಡೆವಲಪರ್ಸ್ ಸಂಸ್ಥೆಯ Sole Proprietor ಆಗಿದ್ದು ಹಾಗೂ ಈಗಾಗಲೇ ಅಪ್‌ಲೋಡ್ ಮಾಡಿರುವ ಚೆಕ್ ಪ್ರತಿಯು ಹೊಂದಾಣಿಕೆಯಾಗುತ್ತಿದ್ದು ಹಾಗೂ ಈಗ ಗುತ್ತಿಗೆದಾರರು ನೀಡಿರುವ ಚೆಕ್ ಪ್ರತಿ/ಪಾನ್ ಕಾರ್ಡ್/ಜಿ.ಎಸ್.ಟಿ ಹೊಂದಾಣಿಕೆ ಆಗುತ್ತಿರುವುದರಿಂದ ಸದರಿಯವರಿಗೆ ಬಾಕಿ ಇರುವ ಬಿಲ್ಲನ್ನು ಪಾವತಿಸಲು ಕೋರುತ್ತಾ, ಗುತ್ತಿಗೆದಾರರು ನೀಡಿರುವ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿ ಟಾಸ್ಕ್ ಅನ್ನು ಮರು ಸಲ್ಲಿಸಲಾಗಿದೆ.

2) 25/2

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

3) 25/2/21

KM DEVELOPERS

9, Mathru Nilaya, 2nd Cross, Sadarahalli Bayanna Layout,
Hebbal, Bengaluru - 560 024
+91 88844 40002 / 99004 91552
kmdevelopers108@gmail.com

ದಿನಾಂಕ: 23/Feb/2021

ರವರಿಗೆ,

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಸಹಕಾರನಗರ, ಬೆಂಗಳೂರು–560092.

ಮಾನ್ಯರೇ,

ವಿಷಯ: ಬಿಲ್ಲಿನಲ್ಲಿ ಕೆ.ಎಂ.ಡೆವಲಪರ್ಸ್ ಚೆಕ್ಕನ್ನು ನಮೂದಿಸಿಕೊಡುವ ಕುರಿತು.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಧುಗೌಡ. ಹೆಚ್.ಎ ಆದ ನಾನು ಬ್ಯಾಟರಾಯನಪುರ ವಿಭಾಗ ವ್ಯಾಪ್ತಿಯ ವಾರ್ಡ್ ಸಂಖ್ಯೆ.05 ರಲ್ಲಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಿ ಹಾಗೂ ಬಿ.ಆರ್ ಸಹ ನಮೂದಿಸಿ ಸಮುಚಿತ ಮಾರ್ಗದಲ್ಲಿ ಬಿಲ್ ಪಾವತಿಗಾಗಿ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಆನ್‌ಲೈನ್ ಮುಖಾಂತರ ಟಾಸ್ಕ್ ರವಾನೆಯಾಗಿರುತ್ತದೆ.

ಮುಂದುವರೆದಂತೆ ಕಾರ್ಯಾದೇಶದಲ್ಲಿ ಗುತ್ತಿಗೆದಾರನಾದ ನನ್ನ ಹೆಸರು ಶ್ರೀ. ಮಧುಗೌಡ. ಹೆಚ್.ಎ ಎಂದು ನಮೂದಿಸಿರುವುದು ಸರಿಯಷ್ಟೇ. ಆದರೆ ನಾನು ಕಾಮಗಾರಿಯ ಬಿಲ್ ಸಲ್ಲಿಸುವ ಸಂಧರ್ಭದಲ್ಲಿ ನನ್ನ ಹೆಸರಿನಲ್ಲಿ ನೊಂದಣಿಯಾಗಿರುವ ಸಂಸ್ಥೆಯಾದ ಕೆ.ಎಂ ಡೆವಲಪರ್ಸ್ ಹಾಗೂ ಸದರಿ ಸಂಸ್ಥೆಗೆ Sole Proprietor ಆಗಿರುವುದರಿಂದ ಸದರಿ ಸಂಸ್ಥೆಯ ಬ್ಯಾಂಕ್/ಶಾಖೆ/ಖಾತೆ/ಸಂಖ್ಯೆಯ ವಿವರಗಳನ್ನು ನೀಡಿರುತ್ತೇನೆ. ಆದ್ದರಿಂದ ಸದರಿ ಮಾಹಿತಿಯನ್ನೇ ಪರಿಗಣಿಸುತ್ತಾ, ನನಗೆ ಬಾಕಿ ಇರುವ ಈ ಕೆಳಕಂಡ ಕಾಮಗಾರಿಗೆ ಸಂಬಂಧಿಸಿದ ಬಿಲ್‌ಗಳನ್ನು ಪಾವತಿಸಲು ಕೋರುತ್ತಾ, ಧೃಢೀಕರಣದೊಂದಿಗೆ ಮುಖ್ಯ ಲೆಕ್ಕಾಧಿಕಾರಿ ಕಛೇರಿಗೆ ವಿವರಗಳನ್ನು ಸಲ್ಲಿಸಲು ಹಾಗೂ ಈಗಾಗಲೇ ಹಿಂದಿರುಗಿಸುವ Task ನಲ್ಲಿ ಸದರಿ ಮಾಹಿತಿಯನ್ನು ಅಪ್‌ಲೋಡ್ ಮಾಡಲು ಕೋರಿದೆ.

ಕಾಮಗಾರಿಯ ಹೆಸರು: Improvements to Storm water Drains in ward no 5 Jakkur, Est Cost: 10.00 Lakhs (**Job Code: 005-20-000069, BR No.179/10-12-2020, Bill Amount Rs.878200.00**)

ಬ್ಯಾಂಕ್ ಹೆಸರು: Canara Bank, Hebbal Branch, Current Account No.0425201024900, IFSC Code: CNRB0000425

ಅಡಕಗಳು: 1. GST Registration Copy
2. Bill Copy
3. Cancelled Cheque Leaf

ವಂದನೆಗಳೊಂದಿಗೆ,

For K.M. DEVELOPERS
Madhugowda
Proprietor

ತಮ್ಮ ವಿಶ್ವಾಸಿ,

(ಮಧುಗೌಡ. ಹೆಚ್)
ಮಾಲೀಕರು, ಮೆ॥ ಕೆ.ಎಂ ಡೆವಲಪರ್ಸ್

ಸಂಖ್ಯೆ: 2681
ದಿನಾಂಕ: 23/2/21

ಆ.ಕ
23/02